ಅಷ್ಟರಲ್ಲಿ ಸ್ವಲ್ಪ ದೂರ ನಡೆದುಹೋಗಿದ್ದ ಅಮಂಡ ಹಿಂತಿರುಗಿದಳು. 'ಯಾಕೆ ನನ್ನನ್ನು ಹಿಂಬಾಲಿಸುತ್ತಿಲ್ಲ. ಬರಲ್ಲವಾ?' ಅನ್ನುವಂತೆ ನೋಡಿದಳು. ಆದರೆ, ರೋಗಿಯ ಕೇಸ್ ನೋಟ್ಸ್ ಮಾಡುತ್ತ ನಿಂತಿದ್ದ ಇವನು ರೋಗಿಗಳಿಗೆ ತೊಂದರೆಯಾಗದಿರಲಿ ಅಂತ, 'ಕಮಿಂಗ್, ಜಸ್ಟ್ ಎ ಮಿನಿಟ್' ಅಂತ ಕೂಗದೆ ಪೆನ್ನು ಹಿಡಿದ ಕೈನಲ್ಲೇ ಒಂದು ಬೆರಳನ್ನು ಎತ್ತಿ 'ಒಂದು ನಿಮಿಷ' ಎಂದು ಸನ್ನೆ ಮಾಡಿದ.

ಅದೇನಾಯ್ತೋ ಅವಳು ಸರಸರ ನಡೆದು ಹೋಗಿಬಿಟ್ಟಳು. 'ದರಿದ್ರದ್ದು... ಸದ್ಯ ಶನಿ ತೊಲಗಿತು' ಅಂತ ಇವನು ತನ್ನ ಕೆಲಸ ಮುಗಿಸಿ ಹೊರಬಂದ. ಹಿಂದಿನ ದಿನ ಮಧ್ಯಾಹ್ನದಿಂದ ಊಟವಿಲ್ಲದೆ ಸುಸ್ತಾಗಿದ್ದ ರಾಮಚಂದ್ರನ್ ಅಮಂಡಾಳನ್ನು ಮತ್ತೆ ಹುಡುಕುವ ಪ್ರಯತ್ನ ಮಾಡಲಿಲ್ಲ.

★★★

ಮರುದಿನ ಬೆಳಗ್ಗೆ ಹಿರಿಯ ವೈದ್ಯರಿಂದ ಕರೆ ಬಂತು. ರಾತ್ರಿ ಯಾವ ಅವಘಡಗಳೂ ಆಗಿರಲಿಲ್ಲ. ಹಾಗಾಗಿ ಯಾಕಿರಬಹುದು ಅಂತ ರಾಮಚಂದ್ರನ್ ಹೋಗಿ ನಿಂತ. ಕೋಣೆಯಲ್ಲಿ ಹಿರಿಯ ವೈದ್ಯನ ಜೊತೆ ಇನ್ನೂ ಇಬ್ಬರಿದ್ದರು. "ನಿನ್ನೆ ಏನಾದರೂ ಗಲಾಟೆಯಾಯ್ತು?" "ಯಾರಾದರೂ ನಿನ್ನನ್ನು ಅವಮಾನಿಸಿದರಾ?" ಅಂತ ಕೇಳಿದರು. ರಾಮಚಂದ್ರನ್ ಇಲ್ಲವೆಂದು ತಲೆಯಾಡಿಸಿದ.

"ಅಮಂಡ ಏನಾದರೂ ಅಂದಳಾ?" ಅಂತ ಕೇಳಿದರು. ರಾಮಚಂದ್ರನ್ ಇಲ್ಲವೆಂದ.

"ಬೇರೆ ಬೇರೆ ದೇಶದಲ್ಲಿ ಯಾವ ಪದ್ಧತಿಗಳಿದ್ದಾವೋ ಗೊತ್ತಿಲ್ಲ. ಆದರೆ, ಇಂಗ್ಲೆಂಡಿನಲ್ಲಿ ದರ್ಜೆಯ ಮೇಲೆ ದಬ್ಬಾಳಿಕೆ ನಡೆಯುವುದಿಲ್ಲ'' ಎಂದರು. ರಾಮಚಂದ್ರನ್, "ಗೊತ್ತು, ಆದರೆ ಇದನ್ನೆಲ್ಲ ಯಾಕೆ ಹೇಳುತ್ತಿದ್ದೀರಿ?" ಅಂತ ಕುತೂಹಲದಿಂದ ಕೇಳಿದ. ಹಿರಿಯ ವೈದ್ಯ ಒಂದು ಹಾಳೆಯನ್ನು ರಾಮಚಂದ್ರನ್ ಮುಂದಕ್ಕೆ ತಳ್ಳಿದ.

ಅದು ಅಮಂಡಾಳ ಸಹಿಯಿದ್ದ ಪತ್ರ. ಓದುತ್ತ ಹೋದಂತೆ ರಾಮಚಂದ್ರನ್ ಮುಖ ಕುಂದಿಹೋಯಿತು, ಕೋಪದಿಂದ ತುಟಿಗಳು ನಡುಗಹತ್ತಿದವು. "ಅಯ್ಯೋ ಅದು ಹಾಗಲ್ಲ..." ಎಂದು ಹೇಳಲು ಬಾಯಿ ತೆರೆದವನು ದೆವ್ವ ಬಂದಂತೆ ಕೂಗಾಡಿಬಿಟ್ಟ!

ಇನ್ನೊಬ್ಬ ರೋಗಿಯ ಬಗ್ಗೆ ಅರ್ಜೆಂಟಾಗಿ ಮಾತಾಡಲು ರಾಮಚಂದ್ರನ್‌ನನ್ನು ವಾರ್ಡಿಗೆ ಹುಡುಕಿಕೊಂಡು ಬಂದು ಕರೆದರೂ ಅವನು ಬರಲಿಲ್ಲವೆಂದೂ, ಮತ್ತೆ ಅವನೆಡೆ ನೋಡಿದಾಗ 'ಫಿಂಗರ್ ಅಪ್ ಯುವರ್ ಆಸ್' ಎನ್ನುವ ಕೀಳು ಅರ್ಥದ ಸನ್ನೆ ಮಾಡಿ ಅವಮಾನ ಮಾಡಿದನೆಂದೂ ಬರೆದು ದೂರುಕೊಟ್ಟಿದ್ದಳು. ಅವಳ ವೃತ್ತಿಯಲ್ಲೇ ಇಂತಹ ವರ್ತನೆಯನ್ನು ಯಾರಲ್ಲೂ ನೋಡಿರಲಿಲ್ಲವೆಂದೂ, ವೈದ್ಯ ವೃತ್ತಿಗೇ ಅವನು ಕಳಂಕವೆಂದೂ ದೂರಿದ್ದಳು. ಅವನು ತೋರಿದ ಅವಾಚ್ಯ ಸನ್ನೆಯನ್ನ ನರ್ಸ್‌ಗಳ ಸ್ಟೇಷನ್‌ನಲ್ಲಿದ್ದ ಇತರರೂ ನೋಡಿದ್ದಾರೆಂದು ಬರೆದು ಅದಕ್ಕೆ ಅವಳ ಸ್ನೇಹಿತರಿಂದಲೂ ಸಹಿ ಪಡಕೊಂಡಿದ್ದಳು.

ರಾಮಚಂದ್ರನ್, "ದಟ್ ಬಿಚ್... ದಟ್ ಬಿಚ್..." ಎನ್ನುತ್ತ ಬುಸುಗುಡತೊಡಗಿದವನು ಅರೆಕ್ಷಣ ಎಲ್ಲಿಂದ ಶುರು ಮಾಡಬೇಕೆಂದು ತಡಬಡಾಯಿಸಿದ. ಹಿಂದಿನ ದಿನದ ಸುಸ್ತು ಪೂರ್ತಿ ಹೋಗಿರಲಿಲ್ಲ. ತಲೆಯಲ್ಲಿ ಪದಗಳು ಹೊಳೆಯಲಿಲ್ಲ. ಕೊನೆಗೆ ಏನಾದರಾಗಲಿ ಅಂತ ಅಮಂಡ ತನ್ನನ್ನು ನಡೆಸಿಕೊಳ್ಳುತ್ತಿದ್ದ ಬಗ್ಗೆ, ಹಿಂಸಿಸುತ್ತಿದ್ದ ಬಗ್ಗೆ ಬಡಬಡಾಯಿಸಿದ. "ನೀವೆಲ್ಲ ಆಗಾಗ ಅದನ್ನೆಲ್ಲ ಗಮನಿಸುತ್ತದ್ದರೂ ಯಾಕೆ ಸುಮ್ಮನಿದ್ದಿರಿ?" ಅಂತ ಪ್ರಶ್ನಿಸಿದ. ಯಾರೊಬ್ಬರೂ ಮಾತಾಡಲಿಲ್ಲ. ಎಲ್ಲರೂ ಗರಬಡಿದವರಂತೆ ರುದ್ರಾವತಾರ ತಾಳಿದ್ದ ರಾಮಚಂದ್ರನ್‌ನ ತಮಿಳು ಉಚ್ಚಾರದ ಇಂಗ್ಲಿಷ್ ಅನ್ನು ಅರ್ಥ ಮಾಡಿಕೊಳ್ಳಲು ಏಕಾಗ್ರ ಚಿತ್ತರಾದಂತೆ ಕಂಡರು. ರಾಮಚಂದ್ರನ್ ಅಷ್ಟೂ ದಿನ ಅದುಮಿಟ್ಟುಕೊಂಡಿದ್ದ ಎಲ್ಲ ದುಃಖಗಳೂ ಒಮ್ಮಲೇ ಧುಮ್ಮಿಕ್ಕಿದ್ದವು.